# Anti Land-Grabbing Action Committee
# ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ

**No. 759, 5th Main, 8th Cross, R.T.Nagar, II Block, Bangalore 560032 Ph: 094481 20305**
**Website : http://savekarnataka.in mail: karnatakasave@gmail.com**


---

**ದಿನಾಂಕ: 26.07.2016**

ಗೆ,
ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು,
ಗೌರವಾನ್ವಿತ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಜಲಸಂರಕ್ಷಣೆಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ.

ನೀರು ಅತ್ಯಮೂಲ್ಯವಾದುದು. ದಿನೇ ದಿನೇ ನೀರಿನ ಕೊರತೆ ಹೆಚ್ಚಾಗಿ ಕಾಣಿಸುತ್ತಿದೆ. ಇದರಿಂದ ತೀವ್ರ ಸಂಕಷ್ಟವನ್ನು ಸಮಾಜ ಭವಿಷ್ಯದಲ್ಲಿ ಅನುಭವಿಸಬೇಕಾಗುತ್ತದೆ. ಆದುದರಿಂದ ಜಲಸಂರಕ್ಷಣೆ ಕಾರ್ಯಕ್ರಮಗಳನ್ನು ಯುದ್ಧೋಪಾದಿಯಲ್ಲಿ ಪರಿಣಾಮಕಾರಿಯಾಗಿ ಒಂದೇ ವ್ಯವಸ್ಥೆಯಡಿಯಲ್ಲಿ ಆದ್ಯತೆಯ ಮೇರೆಗೆ ಅನುಷ್ಠಾನ ಮಾಡಬೇಕಾದ ಜರೂರು ಅವಶ್ಯಕತೆ ನಮ್ಮ ಮುಂದಿದೆ. ಪರಿಸರ ಸಂರಕ್ಷಣೆ ಮತ್ತು ಮಳೆ ನೀರು ಪೋಲಾಗದಂತೆ ಸಂಗ್ರಹಿಸಲು ಕ್ರಮ ಕೈಗೊಳ್ಳಬೇಕಾಗಿದೆ.

ಜನಸಂಖ್ಯೆ ಬೆಳವಣಿಗೆ ಜೊತೆ ಕೃಷಿ ಮತ್ತು ಕೈಗಾರಿಕಾ ಚಟುವಟಿಕೆಗಳು ತೀವ್ರಗೊಂಡಿರುವುದರಿಂದ ನೀರಿನ ಬಳಕೆಯೂ ಹೆಚ್ಚಾಗಿರುತ್ತದೆ. ಕುಡಿಯುವ ನೀರಿಗೆ ಹೆಚ್ಚಾಗಿ ಕೊಳವೆ ಭಾವಿಗಳನ್ನು ಆಶ್ರಯಿಸಿರುತ್ತೇವೆ. ಆದರೆ ದಿನೇ ದಿನೇ ಪಾತಾಳಕ್ಕಿಳಿಯುತ್ತಿರುವ ಅಂತರ್ಜಲ ಮಟ್ಟದಿಂದ, ನೀರಿನಲ್ಲಿ ಫ್ಲೋರೈಡ್ ಅಂಶದ ಪ್ರದೇಶವು ವಿಸ್ತಾರಗೊಳ್ಳುತ್ತಲೇ ಇರುತ್ತದೆ. ಇದರಿಂದ ಆರೋಗ್ಯದ ಮೇಲೆ ಬಹಳ ಕೆಟ್ಟ ಪರಿಣಾಮಗಳಾಗುತ್ತಿದೆ. ಇದಲ್ಲದೆ, ಭ್ರಷ್ಟರ ಭೂದಾಹಕ್ಕೆ ಸಿಲುಕಿ ಈಗಾಗಲೇ ಬಹುತೇಕ ಜಲಮೂಲಗಳು ನಾಶವಾಗಿರುವುದು ತಮಗೂ ತಿಳಿದಿರುವ ಸಂಗತಿಯಾಗಿದೆ. ಈಗಲೇ ಎಚ್ಚೆತ್ತುಕೊಂಡು ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಎಂದೆಂದಿಗೂ ಸರಿಪಡಿಸಲಾಗದ ಕಠಿಣ ಸ್ಥಿತಿ ಎದುರಾಗುವುದು ನಿಶ್ಚಯ.

ನಮ್ಮ ಸಮಿತಿ ಸಭೆಯಲ್ಲಿ ಇದರ ಬಗ್ಗೆ ಚರ್ಚೆ ನಡೆದು ಹೊರಹೊಮ್ಮಿದ ಕೆಲವು ಸಲಹೆಗಳನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ.

1. ಸರ್ಕಾರ ದೀರ್ಘಕಾಲಿಕ ದೊಡ್ಡ ಜಲಸಂರಕ್ಷಣಾ ಯೋಜನೆಗಳ ಜೊತೆ ಜೊತೆಯಲ್ಲೇ ಅಲ್ಪಾವಧಿಯ ಯೋಜನೆಗಳ ಮೂಲಕ ಕಾರ್ಯಕ್ರಮಗಳನ್ನು ರೂಪಿಸಿ ಸಣ್ಣ ಸಣ್ಣ ಜಲಮೂಲಗಳನ್ನು ಸಂರಕ್ಷಿಸಿ ಅವುಗಳನ್ನು ಪುನಸ್ಚೇತನಗೊಳಿಸುವ ಕಾರ್ಯವನ್ನು ಕೈಗೆತ್ತಿಕೊಂಡು ಸಮರೋಪಾದಿಯಲ್ಲಿ ಕಾರ್ಯಗತ ಮಾಡುವುದು

2. ನಗರ ಪ್ರದೇಶಗಳಲ್ಲಿ ಕೆರೆ ಮತ್ತು ಇನ್ನಿತರ ಜಲಮೂಲಗಳನ್ನು ಸಂರಕ್ಷಿಸಲು ಸರ್ಕಾರದ ಮಟ್ಟದಲ್ಲಿ ಅನೇಕ ವ್ಯವಸ್ಥೆಗಳು ಅಸ್ತಿತ್ವದಲ್ಲಿದ್ದರೂ, ಅವುಗಳ ನಡುವೆ ಸಮನ್ವಯದ ಕೊರತೆಯಿಂದಾಗಿ ನಿರೀಕ್ಷಿತ ಫಲಗಳನ್ನು ಕಾಣಲು ಸಾಧ್ಯವಾಗುತ್ತಿಲ್ಲ.ಅವುಗಳು ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸಿದ್ದರೆ ನೀರಿಗಾಗಿ ಹಾಹಾಕಾರ ಎದ್ದಿರುವ ಇಂದಿನ ಕೆಟ್ಟ ಪರಿಸ್ಥಿತಿ ಇರುತ್ತಿರಲಿಲ್ಲ. ಅವುಗಳು ಪರಿಣಾಮಕಾರಿಯಾಗಿ

ಕಾರ್ಯನಿರ್ವಹಿಸದ ಕಾರಣ ಇಂದು ನಗರಗಳಿಗೆ ಕೋಟಿ ಕೋಟಿ ಸಾರ್ವಜನಿಕರ ತೆರಿಗೆ ಹಣದ ಖರ್ಚಿನಲ್ಲಿ ದೂರದ ನದಿಗಳಿಂದ ನೀರು ಪೂರೈಕೆ ಮಾಡಬೇಕಾಗಿದೆ. ನಗರ ಪ್ರದೇಶಗಳಲ್ಲಿರುವ ಬಹುತೇಕ ಎಲ್ಲಾ ಕೆರೆಗಳಿಗೆ ನೀರು ಹರಿದು ಬರಲು ಬೇಕಾದ ಪೋಷಕ ಕಾಲುವೆಗಳನ್ನು ಉದ್ದೇಶಪೂರ್ವಕವಾಗಿ ಮುಚ್ಚಿದ ಪರಿಣಾಮ ಕೆರೆಗಳು ಬತ್ತಿದ್ದು, ಅವುಗಳು ಭೂಗಳ್ಳರ ಪಾಲಾಗಿರುವುದು ದುರದೃಷ್ಟವೇ ಸರಿ. ಬತ್ತಿದ ಕೆರೆಯಂಗಳದಲ್ಲಿ ಕೇವಲ ' ಟ್ರೀ ಪಾರ್ಕ್ ' ಮಾಡಬೇಕೆಂಬ ಸರ್ವೋಚ್ಚ ನ್ಯಾಯಾಲಯದ ಸ್ಪಷ್ಟ ಆದೇಶ ಇದ್ದರೂ ಸರ್ಕಾರಿ ಸಂಸ್ಥೆಯಾದ ಬಿ ಡಿ ಎ ಇದರ ಉಲ್ಲಂಘನೆ ಮಾಡಿ 23 ಕೆರೆಯಂಗಳಗಳಲ್ಲಿ ವಸತಿ ಬಡಾವಣೆಗಳನ್ನು ನಿರ್ಮಿಸಿರುವುದು ಸರ್ಕಾರದ ಮೇಲಿನ ಭೂಗಳ್ಳರ ಪ್ರಭಾವನ್ನು ಬಹಿರಂಗಗೊಳಿಸಿದಂತಿದೆ. ಕೆರೆಯಂಗಳಗಳ ತೆರವು ಕಾಯಾಚರಣೆಯ ಕ್ರಿಯಾ ಯೋಜನೆ ಯಾವ ರೀತಿ ಇರಬೇಕೆಂಬುದನ್ನು ನಮ್ಮ ಸಮಿತಿಯು ತಮ್ಮನ್ನು ದಿನಾಂಕ 08.05.2015 ರಂದು ಬೇಟಿಮಾಡಿ ಕೊಟ್ಟ 20 ಅಂಶಗಳ ಪಟ್ಟಿಯಲ್ಲಿ ಸ್ಪಷ್ಟವಾಗಿ ತಿಳಿಸಿತ್ತು. ಆದ್ದರಿಂದ ಈಗಲಾದರೂ ತಾವು ಅದನ್ನು ಪರಿಶೀಲಿಸಿ, ಸಾರ್ವಜನಿಕ ಹಿತಾಸಕ್ತಿಯಲ್ಲಿ ಒಂದು ದೃಢವಾದ ಕ್ರಿಯಾ ಯೋಜನೆ ತಯಾರಿಸಿ, ಅದನ್ನು ಅನುಷ್ಠಾನಗೊಳಿಸುವ ಬದ್ಧತೆ ತೋರಿ ನಗರಗಳಲ್ಲಿನ ಜಲ ಮೂಲಗಳನ್ನು ಪುನಸ್ಚೇತನಗೊಳಿಸಿ ಅವುಗಳನ್ನು ಸಂರಕ್ಷಿಸುವುದು. ಸಲಹಾ ಸಮಿತಿಗಳು ಮತ್ತು ಅನುಷ್ಠಾನ ಸಮಿತಿಗಳಲ್ಲಿ ಸ್ಥಳೀಯ ಜಾಗರೂಕ ನಾಗರಿಕರನ್ನೊ ಸದಸ್ಯರನ್ನಾಗಿ ಮಾಡಿ ಸಾರ್ವಜನಿಕರ ಸಲಹೆಗಳಿಗೆ ಮನ್ನಣೆ ನೀಡಿ ಕಾರ್ಯ ನಿರ್ವಹಿಸುವುದು ಪರಿಣಾಮಕಾರಿಯಾಗುತ್ತದೆ.

3. ನಮ್ಮ ಗಮನಕ್ಕೆ ಬಂದಿರುವಂತೆ ರಾಜ್ಯದಲ್ಲಿನ ಹಲವಾರು ಜಿಲ್ಲೆಗಳಲ್ಲಿ, ಮುಖ್ಯವಾಗಿ ನೀರಿನ ಅಭಾವ ಎದಿರುಸುತ್ತಿರುವ ಕೋಲಾರ ಜಿಲ್ಲೆಯಲ್ಲಿ ಹೆಚ್ಚಿನ ನೀಲಗಿರಿ ತೋಪುಗಳನ್ನು ಬೆಳೆಸಲಾಗಿದೆ. ನೀಲಗಿರಿ ಮರಗಳು ನೀರನ್ನು ಬೇಗ ಆವಿಯಾಗಿಸುವುದರಿಂದ ಅಂತರ್ಜಲ ಮಟ್ಟ ಕುಸಿಯಲು ಒಂದು ಪ್ರಮುಖ ಕಾರಣವಾಗಿದೆ. ಆದ್ದರಿಂದ ನೀಲಗಿರಿ ಮರಗಳನ್ನು ತೆಗೆದುಹಾಕಿ ಆ ಪ್ರದೇಶಗಳಲ್ಲಿ ರೈತರಿಗೂ ಲಾಭದಾಯಕವಾಗುವ ಬೇರೆ ಕೃಷಿ ನಡೆಸಲು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವುದು.

4. ಫಿಲ್ಟರ್ ಮರಳು ದಂಧೆಯಿಂದ ಆಗುತ್ತಿರುವ ದುಷ್ಪರಿಣಾಮಗಳನ್ನು ಪ್ರತ್ಯೇಕವಾಗಿ ತಮಗೆ ಬಿಡಿಸಿ ಹೇಳಬೇಕಾಗಿಲ್ಲ. ಆದ್ದರಿಂದ ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಫಿಲ್ಟರ್ ಮರಳು ದಂಧೆಯನ್ನು ನಿಯಂತ್ರಿಸಲು ಬೇಕಾದ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.

5. ರಾಜ್ಯದಲ್ಲಿ ಇರುವ ಗುಡ್ಡ ಬೆಟ್ಟಗಳ ಬುಡದಲ್ಲಿ ನೀರು ಸಂಗ್ರಹವಾಗುವ ರೀತಿಯಲ್ಲಿ 'ಗಾರ್ಲ್ಯಾಂಡ್ ಕೆನಾಲ್' ಗಳನ್ನು ನಿರ್ಮಿಸಿ, ಆ ನೀರನ್ನು ಸರಿಯಾಗಿ ಶೇಖರಿಸಿ ಸ್ಥಳೀಯವಾಗಿ ನೀರು ಪೂರೈಸುವ ಸಣ್ಣ ಸಣ್ಣ ಯೋಜನೆಗಳನ್ನು ರೂಪಿಸುವುದು.

6. ಎಲ್ಲೆಲ್ಲೂ ನೀರಿನ ಅಭಾವ ತಲೆದೋರಿರುವಾಗ ಮಳೆ ನೀರು ವ್ಯರ್ಥವಾಗಿ ಪೋಲಾಗುತ್ತಿರುವ ವಿಷಯ ಈಗ ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ಬಿದ್ದ ಮಳೆನೀರು ಸಂಗ್ರಹವಾಗುವ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಪೋಲಾಗುತ್ತಿದೆ. ಅಭಿವೃದ್ಧಿಯ ವೇಗಕ್ಕೆ ಅನುಗುಣವಾಗಿ ಮಳೆ ನೀರು ಸಂಗ್ರಹಿಸುವ ಕೆರೆ, ಕುಂಟೆಗಳು ಹೆಚ್ಚಾಗಬೇಕಾಗಿತ್ತು. ದುರ್ದೈವ ಎಂದರೆ ಹಿಂದೆ ಇದ್ದ ಕೆರೆ, ಕುಂಟೆ, ಸಂಪರ್ಕ ಕಾಲುವೆಗಳನ್ನು ನಾಶಪಡಿಸಿರುವುದರಿಂದ ಮಳೆ ನೀರು ಸಂಗ್ರಹ ತೀರಾ ಕಡಿಮೆಯಾಗಿದೆ. ಪ್ರಕೃತಿ ಕೊಡುಗೆಯಾಗಿರುವ ಮಳೆ ನೀರಿಗೆ ಯಾವುದೇ ವೆಚ್ಚವಿಲ್ಲ ಮತ್ತು ನೀರು ಅತೀ ಶುದ್ಧವಾಗಿರುತ್ತದೆ. ಅಂತರ್ಜಲ ವೃದ್ಧಿಸುವ ಕಟ್ಟುನಿಟ್ಟಾದ ಕಾರ್ಯಕ್ರಮಗಳನ್ನೇ ಅನಷ್ಠಾನ ಮಾಡಬೇಕಾಗುತ್ತದೆ. ಇರುವ ಎಲ್ಲಾ ಕೆರೆ, ಕುಂಟೆ ಮತ್ತು ಸಂಪರ್ಕ ಕಾಲುವೆಗಳನ್ನು ಸುಸ್ಥಿತಿಯಲ್ಲಿಡಲು ಕ್ರಮ ಕೈಗೊಳ್ಳಬೇಕಾಗುತ್ತದೆ. ಕೆರೆಗಳ ಅಭಿವೃದ್ಧಿಯು ವಿವಿಧ ಯೋಜನೆ ಮತ್ತು ವ್ಯವಸ್ಥೆಗಳ ಅಡಿ ಹಂಚಿ ಹೋಗಿದ್ದು ಹಣ

ಖರ್ಚಾಗುತ್ತಿದ್ದರೂ ನಿರೀಕ್ಷಿತ ಫಲ ದೊರಕುತ್ತಿಲ್ಲ ಈ ನಿಟ್ಟಿನಲ್ಲಿ ನಮ್ಮ ರಾಜ್ಯದವರಾದ ಶ್ರೀ ಅಯ್ಯಪ್ಪ ಮಸಗಿಯವರು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿರುವುದು ತಮಗೂ ತಿಳಿದಿದೆಯೆಂದು ಭಾವಿಸುತ್ತೇನೆ. ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಇನ್ನೂ ಅನೇಕ ಪ್ರಶಸ್ತಿ ಪುರಸ್ಕೃತರಾದ ಶ್ರೀ ಅಯ್ಯಪ್ಪ ಮಸಗಿಯವರು ಕಡಿಮೆ ಖರ್ಚಿನಲ್ಲಿ ಸಣ್ಣ ಸಣ್ಣ ಪ್ರದೇಶಗಳಲ್ಲಿ ಮಳೆ ನೀರು ಕೊಯ್ಲು ಮಾಡಿಕೊಂಡು ನೀರಿನ ಅಭಾವವನ್ನು ನೀಗಿಸಿಕೊಳ್ಳುವ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ನಮ್ಮ ಸಮಿತಿಯೂ ಸಹ ಅವರನ್ನು ಕರೆಸಿ ನಮ್ಮ ಸದಸ್ಯರುಗಳಿಗೆ ಮಳೆ ನೀರು ಕೊಯ್ಲಿನ ಬಗ್ಗೆ ಮಾಹಿತಿ ಕೊಡಿಸಿ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಆದ್ದರಿಂದ ಶ್ರೀ ಅಯ್ಯಪ್ಪ ಮಸಗಿ ಮತ್ತು ಇತರೆ ಮಳೆ ನೀರು ಕೊಯ್ಲು ತಜ್ಞರ ಸಲಹೆಯನ್ನು ಪಡೆದು, ಮೊದಲನೆಯದಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ, ಪೋಲಾಗುತ್ತಿರುವ ಮಳೆನೀರನ್ನು ಯಶಸ್ವಿಯಾಗಿ ಸಂಗ್ರಹಿಸಿ ಅದನ್ನು ಸದ್ಬಳಕೆ ಮಾಡುವ ಯೋಜನೆಗಳನ್ನು ರೂಪಿಸುವುದು. ಕಡ್ಡಾಯವಾಗಿ ಹೇರುವ ಯಾವುದೇ ಯೋಜನೆಯಿಂದ ನಿರೀಕ್ಷಿತ ಯಶಸ್ಸು ಸಾಧ್ಯವಿಲಯವೆಂಬುದು ತಮಗೂ ತಿಳಿದಿರುತ್ತದೆ.

ಜಲಕ್ಷಾಮದ ಸಮಸ್ಯೆಯು ಅತ್ಯಂತ ಆತಂಕಕಾರಿ ಮಟ್ಟ ತಲುಪುತ್ತಿದ್ದು, ಯೋಜನೆಗಳು ಸಮರೋಪಾದಿಯಲ್ಲಿ ಕಾರ್ಯಗತವಾಗಬೇಕಾಗಿದೆ. ಮೇಲೆ ಹೇಳಿರುವ ಸಲಹೆಗಳನ್ನು ಪರಿಗಣಿಸಿ ತಜ್ಞರ ಜೊತೆ ಸಮಾಲೋಚಿಸಿ ಜಲಸಂರಕ್ಷಣೆಗೆ ಬೇಕಾದ ಸಮರ್ಪಕ ಕ್ರಮಗಳನ್ನು ತೆಗೆದುಕೊಳ್ಳಲು ನಮ್ಮ ಸಮಿತಿಯು ಒತ್ತಾಯಿಸುತ್ತದೆ. ಜಲಸಂರಕ್ಷಣೆಯ ಯೋಜನೆಗಳನ್ನು ರೂಪಿಸಿ ಒಂದೇ ವ್ಯವಸ್ಥೆಯಡಿಯಲ್ಲಿ ಕಾರ್ಯ ನಿರ್ವಹಿಸುವಂತೆ ಮಾಡಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳುತ್ತೀರೆಂದು ನಂಬಿದ್ದೇವೆ. ಎಲ್ಲಾ ಗಂಭೀರ ಸಮಸ್ಯೆಗಳಿಗೂ ಸಾರ್ವಜನಿಕರೇ ಹೋರಾಟ ಮಾಡಿ ಸರ್ಕಾರ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಬೇಕೆಂಬ ನಂಬಿಕೆಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ತಾವು ದೃಢವಾದ ನಿರ್ದಾರಗಳನ್ನು ತೆಗೆದುಕೊಳ್ಳುತ್ತೀರೆಂದು ನಂಬಿದ್ದೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಎ. ಟಿ. ರಾಮಸ್ವಾಮಿ

(ಎ. ಟಿ. ರಾಮಸ್ವಾಮಿ)
ಸಂಚಾಲಕರು

ಯಥಾ ನಕಲನ್ನು:

1. ಶ್ರೀ ಎಂ.ಬಿ. ಪಾಟೀಲ್ ರವರು, ಸನ್ಮಾನ್ಯ ಜಲ ಸಂಪನ್ಮೂಲ ಮಂತ್ರಿಗಳು , ವಿಕಾಸ ಸೌಧ, ಬೆಂಗಳೂರು ಇವರಿಗೆ - ತಮ್ಮ ಇಲಾಖೆಯಿಂದ ಜಲಸಂರಕ್ಷಣೆಗೆ ತೆಗೆದುಕೊಳ್ಳಬಹುದಾದ ಕಾರ್ಯಕ್ರಮಗಳನ್ನು ತಜ್ಞರೊಂದಿಗೆ ಸಮಾಲೋಚಿಸಿ, ಸನ್ಮಾನ್ಯ ಮುಖ್ಯ ಮಂತ್ರಿಗಳು ದೃಢವಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಬೇಕಾದ ಅಗತ್ಯ ಮಾಹಿತಿಗಳನ್ನು ನೀಡಲು ವಿನಂತಿಸಿದೆ

2. ಶ್ರೀ ಟಿ. ಬಿ. ಜಯಚಂದ್ರ, ಸನ್ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ಸಣ್ಣ ನೀರಾವರಿ ಸಚಿವರು , ವಿಧಾನ ಸೌಧ, ಬೆಂಗಳೂರು, ಇವರಿಗೆ - ತಮ್ಮ ಇಲಾಖೆಯಿಂದ ಜಲಸಂರಕ್ಷಣೆಗೆ ತೆಗೆದುಕೊಳ್ಳಬಹುದಾದ ಕಾರ್ಯಕ್ರಮಗಳನ್ನು ತಜ್ಞರೊಂದಿಗೆ ಸಮಾಲೋಚಿಸಿ, ಸನ್ಮಾನ್ಯ ಮುಖ್ಯ ಮಂತ್ರಿಗಳು ದೃಢವಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಬೇಕಾದ ಅಗತ್ಯ ಮಾಹಿತಿಗಳನ್ನು ನೀಡಲು ವಿನಂತಿಸಿದೆ